# ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಣಸೂರು.

## ಸಿ.ಸಿ. ಸಂಖ್ಯೆ 491/2023

ಹೆಸರುಃ ಯೋಗೇಶ ಪಿಡಬ್ಲ್ಯೂ–06 ಸಿಡಬ್ಲ್ಯೂ–08

ತಂದೆಃ ಪುಟ್ಟ ಲಿಂಗಯ್ಯ

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾದ ದಿನಾಂಕಃ 10.03.2026

ವಯಸ್ಸುಃ 40 ವರ್ಷ

ಕೆಲಸಃ ಗೊಬ್ಬರದ ಕಂಪೆನಿಯಲ್ಲಿ ಕೆಲಸ.

ವಾಸಸ್ಥಳಃ ಕರೀಗೌಡರ ಬೀದಿ , ಹುಣಸೂರು.

ಮುಖ್ಯ ವಿಚಾರಣೆಃ ಸ.ಸ.ಅ.ರವರಿಂದಃ

ಸಾಕ್ಷಿ ನಿಪಿ–2 ರ ಮಹಜರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–2 ಬಿ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 15.07.2023 ರಂದು ಘಟನಾ ಸ್ಥಳದಲ್ಲಿ ಮಾಡಿದ್ದೇನೆ. ಪೊಲೀಸರಿಗೆ ನಾನೇ ಸ್ಥಳ ತೋರಿಸಿದ್ದೇನೆ. ನಿಪಿ–2 ರ ಮಹಜರ್ ನ್ನು ಬೆಳಿಗ್ಗೆ 8 ರಿಂದ 9 ಗಂಟೆಯವರೆಗೆ ಮಾಡಿದ್ದಾರೆ. ನನ್ನ ಜೊತೆ ಚಾಸಾ–5 ರವರು ಸಹಿ ಹಾಕಿದರು ಹಾಗೂ ಚಾಸಾ–1 ಹಾಜರಿದ್ದರು. ಪೊಲೀಸರು ಮಹಜರು ಸಮಯದಲ್ಲಿ ಒಂದು ಕಲ್ಲನ್ನು ಅಮಾನತ್ತು ಪಡಿಸಿಕೊಂಡಿದ್ದಾರೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮುಮಾ–1 ರ ಕಲ್ಲನ್ನು ನೋಡಿ ಗುರುತಿಸುತ್ತಾರೆ. ನಿಪಿ–2 ರಲ್ಲಿ ಬರೆದ ವಿಷಯಗಳು ಗೊತ್ತಿದೆ. ಓದಿ ಸಹಿ ಹಾಕಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀ ಸವಾಲುಃ ಸ.ಸ.ಅ. ರವರಿಂದಃ**

ಮಹಜರು ಸಮಯದಲ್ಲಿ ಘಟನಾ ಸ್ಥಳವನ್ನು ಚಾಸಾ-2 ರವರು ತೋರಿಸಿದರು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್.ಎಸ್.ಜಿ. ವಕೀಲರಿಂದಃ**

ಆರೋಪಿತರು ಹಾಜರಿದ್ದು ಕಾಲಾವಕಾಶ ಕೋರಿದ್ದು ಸೂಕ್ತ ಕಾರಣವನ್ನು ನೀಡದೇ ಇರುವ ಕಾರಣ ಕೋರಿಕೆಯನ್ನು ತಳ್ಳಿ ಹಾಕಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,

ನ್ಯಾಯಾಧೀಶರು, ಹುಣಸೂರು.